**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ. 1080/2020

ಸಿ.ಡಬ್ಲೂಃ 9 ಪಿ.ಡಬ್ಲೂಃ9

ಹೆಸರುಃ ಲಕ್ಷ್ಮವ್ವ

ಗಂಡನ ಹೆಸರುಃ ಮಾರುತಿ ಚಲವಾದಿ

ವಯಸ್ಸುಃ 30 ವರ್ಷ

ಉದ್ಯೋಗಃ ಒಕ್ಕಲುತನ

ವಿಳಾಸಃ ಮುದೇನಗುಡಿ ತಾಃ ರೋಣ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 11/09/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ**

**1.** ಚಾಸಾ–1, 4 ರಿಂದ 7, 10 ರವರು ನಮ್ಮ ಓಣಿಯವರು. ಚಾಸಾ–8 ನನ್ನ ಗಂಡ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನಮ್ಮ ಓಣಿಯವರು. ಸುಮಾರು 4–5 ವರ್ಷಗಳ ಹಿಂದೆ ಚಲವಾದಿ ಓಣಿಯಲ್ಲಿ ಬಾಯಿ ಸಪ್ಪಳ ಕೇಳಿ ನಾನು ಮತ್ತು ಚಾಸಾ–8 ರವರು ಹೋದಾಗ ಆರೋಪಿಗಳು ಮತ್ತು ಚಾಸಾ–1 ರವರು ಜಗಳವಾಡುತ್ತಿದ್ದರು. ಆಗ ನಾವು ಜಗಳವನ್ನು ಬಿಡಿಸಿ ನಮ್ಮ ಪಾಡಿಗೆ ನಮ್ಮ ಮನೆಗೆ ಬಂದಿರುತ್ತೇವೆ. ಯಾವ ಕಾರಣಕ್ಕಾಗಿ ಜಗಳವಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಘಟನೆಯ ಬಗ್ಗೆ ನನಗೆ ಏನು ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ ಸ ಅ ರವರು ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸ.ಸ.ಅ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ– ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

1. ದಿನಾಂಕ 10/06/2020 ರಂದು ಸಾಯಂಕಾಲ 5–30 ರ ಸುಮಾರಿಗೆ ಚಾಸಾ–1 ಮತ್ತು ಆರೋಪಿತರ ನಡುವೆ ಜಗಳವಾಗಿತ್ತು ಎಂದರೆ ಸರಿ. ನಾನು, ಚಾಸಾ–8 ಮತ್ತು ಚಾಸಾ–10 ರವರು ನಮ್ಮ ಮನೆಯ ಹತ್ತಿರ ಇದ್ದಾಗ ಚಾಸಾ–1 ರವರ ಮನೆಯ ಹತ್ತಿರ ಬಾಯಿ ಸಪ್ಪಳವಾಗುವುದನ್ನು

ಕೇಳಿಸಿಕೊಂಡು ಹೋಗಿದ್ದೇವು ಎಂದರೆ ಸರಿ. ಆರೋಪಿತರು ಚಾಸಾ-4 ರವರ ಮನೆಯ ಮುಂದೆ ಮುಳ್ಳು ಹಚ್ಚಲು ಹೋಗಿದ್ದಾಗ ಚಾಸಾ-1 ರವರು ಆರೋಪಿತರಿಗೆ ನಮ್ಮ ಮನೆಯ ಮುಂದೆ ಮುಳ್ಳನ್ನು ಹಚ್ಚಿದರೇ ನಾವು ಎಲ್ಲಿ ಓಡಾಡಬೇಕು ಎಂದು ಕೇಳಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆಗ ಆರೋಪಿತರು ಎಲ್ಲರೂ ಕೂಡಿಕೊಂಡು ಚಾಸಾ-1 ಮತ್ತು 4 ರವರಿಗೆ ಎಳೆದಾಡಿ ಚಾಸಾ-4 ರವರಿಗೆ ಮನೆ ಬಿಡು ಎಂದರೆ ಬಿಡುತ್ತಿಲ್ಲ ಬೋಸುಡಿ ಮಗನೇ ಬೈದು ಸಿಕ್ಕ ಸಿಕ್ಕಲ್ಲಿ ಹೊಡೆದಿರುತ್ತಾರೆಂದರೆ ಸರಿಯಲ್ಲ. ಆಗ ಚಾಸಾ-4 ರವರು ಆರೋಪಿತರಿಗೆ ಸದರಿ ಆಸ್ತಿಯನ್ನು ನಾನು ಖರೀದಿಗೆ ಸಂಚಗಾರ ಕೊಟ್ಟೀನಿ ನನ್ನ ಮನೆಯಲ್ಲಿ ನಾನು ಇದ್ದೀನಿ ಎಂದಾಗ ಯಾವದಲೇ ಬೊಸುಡಿಕೇ ನಿನ್ನ ಜಾಗ ಎಂದು ಆರೋಪಿತರು ಎಲ್ಲರೂ ಕೂಡಿಕೊಂಡು ಚಾಸಾ-4 ರವರಿಗೆ ಹೊಡೆಯುತ್ತಿದ್ದಾಗ ಚಾಸಾ-1 ರವರು ಜಗಳವನ್ನು ಬಿಡಿಸಲು ಬಂದಿರುತ್ತಾರೆ. ಅವರಿಗೂ ಸಹ ಆರೋಪಿತರು ಹೊಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನನ್ನ ನಾನು, ಚಾಸಾ-5 ರಿಂದ 7, ಚಾಸಾ-8 ಮತ್ತು 10 ರವರು ಬಂದು ಜಗಳವನ್ನು ಬಿಡಿಸಿರುತ್ತೇವೆ ಎಂದರೆ ಸರಿ.ನಂತರ ಆರೋಪಿತರು ನೀವು ಬಂದಿದ್ದೀರಿ ಎಂದು ಉಳಿದುಕೊಂಡಿದ್ದಾರೆ ಅವರು ಈ ಊರಲ್ಲಿ ಇದ್ದು ಬಾಳುವೆ ಮಾಡಲೇ ನೋಡೋಣ ಎಂದು ಬೆದರಿಕೆ ಹಾಕಿರುತ್ತಾರೆಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ PKU ವಕೀಲರಿಂದಃ**

ಚಾಸಾ-1 ಮತ್ತು ಆರೋಪಿತರ ನಡುವೆ ಜಗಳವಾಗಿರುತ್ತದೆ ಎಂದು ಹೇಳುತ್ತಿರುವ ದಿನಾಂಕ ನನಗೆ ಗೊತ್ತಿಲ್ಲ. ನಾನು ಮತ್ತು ಚಾಸಾ-8 ರವರು ಚಾಸಾ-1 ರವರ ಮನೆಯ ಹತ್ತಿರ ಬಾಯಿ ಸಪ್ಪಳವಾಗುವುದನ್ನು ಕೇಳಿಸಿಕೊಂಡು ಮನೆಯ ಹತ್ತಿರ ಹೋಗಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು ಚಾಸಾ-8 ರವರು ಯಾವುದೇ ಜಗಳವನ್ನು ಬಿಡಿಸಿರುವುದಿಲ್ಲ ಮತ್ತು ಆ ದಿನ ಯಾವುದೇ ಜಗಳವಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**
**ನ್ಯಾಯಾಧೀಶರು ರೋಣ .**

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ. 1080/2020

ಸಿ.ಡಬ್ಲೂಃ 8 ಪಿ.ಡಬ್ಲೂಃ 8

ಹೆಸರುಃ ಮಾರುತಿ

ತಂದೆಯ ಹೆಸರುಃ ಭರಮಪ್ಪ ಚಲವಾದಿ

ವಯಸ್ಸುಃ 49 ವರ್ಷ

ಉದ್ಯೋಗಃ ಒಕ್ಕಲುತನ

ವಿಳಾಸಃ ಮುದೇನಗುಡಿ ತಾಃ ರೋಣ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 11/09/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ**

**1.** ಚಾಸಾ–1, 4 ರಿಂದ 7, 10 ರವರು ನಮ್ಮ ಓಣಿಯವರು. ಚಾಸಾ–9 ನನ್ನ ಹೆಂಡತಿ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನಮ್ಮ ಓಣಿಯವರು. ಸುಮಾರು 4–5 ವರ್ಷಗಳ ಹಿಂದೆ ಚಲವಾದಿ ಓಣಿಯಲ್ಲಿ ಬಾಯಿ ಸಪ್ಪಳ ಕೇಳಿ ನಾನು ಮತ್ತು ಚಾಸಾ–9 ರವರು ಹೋದಾಗ ಆರೋಪಿಗಳು ಮತ್ತು ಚಾಸಾ–1 ರವರು ಜಗಳವಾಡುತ್ತಿದ್ದರು. ಆಗ ನಾವು ಜಗಳವನ್ನು ಬಿಡಿಸಿ ನಮ್ಮ ಪಾಡಿಗೆ ನಮ್ಮ ಮನೆಗೆ ಬಂದಿರುತ್ತೇವೆ. ಯಾವ ಕಾರಣಕ್ಕಾಗಿ ಜಗಳವಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ ಸ ಅ ರವರು ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸ.ಸ.ಅ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ– ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

1. ದಿನಾಂಕ 10/06/2020 ರಂದು ಸಾಯಂಕಾಲ 5–30 ರ ಸುಮಾರಿಗೆ ಚಾಸಾ–1 ಮತ್ತು ಆರೋಪಿತರ ನಡುವೆ ಜಗಳವಾಗಿತ್ತು ಎಂದರೆ ಸರಿ. ನಾನು, ಚಾಸಾ–9 ಮತ್ತು ಚಾಸಾ–10 ರವರು ನಮ್ಮ ಮನೆಯ ಹತ್ತಿರ ಇದ್ದಾಗ ಚಾಸಾ–1 ರವರ ಮನೆಯ ಹತ್ತಿರ ಬಾಯಿ ಸಪ್ಪಳವಾಗುವುದನ್ನು

ಕೇಳಿಸಿಕೊಂಡು ಹೋಗಿದ್ದೇವು ಎಂದರೆ ಸರಿ. ಆರೋಪಿತರು ಚಾಸಾ-4 ರವರ ಮನೆಯ ಮುಂದೆ ಮುಳ್ಳು ಹಚ್ಚಲು ಹೋಗಿದ್ದಾಗ ಚಾಸಾ-1 ರವರು ಆರೋಪಿತರಿಗೆ ನಮ್ಮ ಮನೆಯ ಮುಂದೆ ಮುಳ್ಳನ್ನು ಹಚ್ಚಿದರೇ ನಾವು ಎಲ್ಲಿ ಓಡಾಡಬೇಕು ಎಂದು ಕೇಳಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆಗ ಆರೋಪಿತರು ಎಲ್ಲರೂ ಕೂಡಿಕೊಂಡು ಚಾಸಾ-1 ಮತ್ತು 4 ರವರಿಗೆ ಎಳೆದಾಡಿ ಚಾಸಾ-4 ರವರಿಗೆ ಮನೆ ಬಿಡು ಎಂದರೆ ಬಿಡುತ್ತಿಲ್ಲ ಬೋಸುಡಿ ಮಗನೇ ಬೈದು ಸಿಕ್ಕ ಸಿಕ್ಕಲ್ಲಿ ಹೊಡೆದಿರುತ್ತಾರೆಂದರೆ ಸರಿಯಲ್ಲ. ಆಗ ಚಾಸಾ-4 ರವರು ಆರೋಪಿತರಿಗೆ ಸದರಿ ಆಸ್ತಿಯನ್ನು ನಾನು ಖರೀದಿಗೆ ಸಂಚಗಾರ ಕೊಟ್ಟೇನಿ ನನ್ನ ಮನೆಯಲ್ಲಿ ನಾನು ಇದ್ದೀನಿ ಎಂದಾಗ ಯಾವದಲೇ ಬೊಸುಡಿಕೇ ನಿನ್ನ ಜಾಗ ಎಂದು ಆರೋಪಿತರು ಎಲ್ಲರೂ ಕೂಡಿಕೊಂಡು ಚಾಸಾ-4 ರವರಿಗೆ ಹೊಡೆಯುತ್ತಿದ್ದಾಗ ಚಾಸಾ-1 ರವರು ಜಗಳವನ್ನು ಬಿಡಿಸಲು ಬಂದಿರುತ್ತಾರೆ. ಅವರಿಗೂ ಸಹ ಆರೋಪಿತರು ಹೊಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನನ್ನ ನಾನು, ಚಸಾ-5 ರಿಂದ 7, ಚಾಸಾ-9 ಮತ್ತು 10 ರವರು ಬಂದು ಜಗಳವನ್ನು ಬಿಡಿಸಿರುತ್ತೇವೆ ಎಂದರೆ ಸರಿ.ನಂತರ ಆರೋಪಿತರು ನೀವು ಬಂದಿದ್ದೀರಿ ಎಂದು ಉಳಿದುಕೊಂಡಿದ್ದಾರೆ ಅವರು ಈ ಊರಲ್ಲಿ ಇದ್ದು ಬಾಳುವೆ ಮಾಡಲೇ ನೋಡೋಣ ಎಂದು ಬೆದರಿಕೆ ಹಾಕಿರುತ್ತಾರೆಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ PKU ವಕೀಲರಿಂದಃ**

ಚಾಸಾ-1 ಮತ್ತು ಆರೋಪಿತರ ನಡುವೆ ಜಗಳವಾಗಿರುತ್ತದೆ ಎಂದು ಹೇಳುತ್ತಿರುವ ದಿನಾಂಕ ನನಗೆ ನೆನಪಿಲ್ಲ. ನಾನು, ಚಾಸಾ-9 ಮತ್ತು 10 ರವರು ಚಾಸಾ-1 ರವರ ಮನೆಯಹತ್ತಿರ ಬಾಯಿ ಸಪ್ಪಳವಾಗುವುದನ್ನು ಕೇಳಿಸಿಕೊಂಡು ಮನೆಯ ಹತ್ತಿರ ಹೋಗಿರುತ್ತೇವೆ ಎಂದು ಸುಳ್ಳುಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು, ಚಾಸಾ-9 ಮತ್ತು 10 ರವರು ಯಾವುದೇ ಜಗಳವನ್ನು ಬಿಡಿಸಿರುವುದಿಲ್ಲ ಮತ್ತು ಆ ದಿನ ಯಾವುದೇ ಜಗಳವಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**
**ನ್ಯಾಯಾಧೀಶರು ರೋಣ .**